ಕೈಗಾರಿಕಾ ಸಲಹೆಗಾರರ ಕಾರ್ಯನಿರ್ವಹಣೆ ಮೇಲೆ ನಿರ್ಭಂದ ಹೇರುವ ವಿಷಯ

೨೪೪ (೪೭೯) ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ಸೇರಿದಂತೆ ಅನೇಕ ಪ್ರಮುಖ ನಗರಗಳಲ್ಲಿ ಕೆಲವು ಖಾಸಗಿ ವ್ಯಕ್ತಿಗಳು (ಸಂಸ್ಥೆಗಳು) ಕೈಗಾರಿಕಾ ಸಲಹೆಗಾರರು ಎಂದು ಹೇಳಿಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರದ ಅಧಿಕೃತ ತಾಂತ್ರಿಕ ನಿರ್ದೇಶಕರಾದ ಟೆಕ್ನಿಕ್, ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ ಕರ್ನಾಟಕ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿ, ಜಿಲ್ಲಾ ಕೈಗಾರಿಕಾ ಕೇಂದ್ರ ಇವೆಲ್ಲವುಗಳು ಇದ್ದರೂ ಕೂಡ ಖಾಸಗಿ ಸಲಹೆಗಾರರಿಂದ ಮಾರ್ಗದರ್ಶನ ಮತ್ತು ಯೋಜನಾ ವರದಿಗಳನ್ನು ಪಡೆಯಬೇಕೆಂದು ಸರ್ಕಾರದವರ ಸಲಹೆ ಸರಿಯಾದುದೆ ?

ಇ) ಖಾಸಗಿ ಸಲಹೆಗಾರರನ್ನು ಪೂರ್ಣವಾಗಿ ನಿರ್ಭಂಧಿಸಿ ಸರ್ಕಾರಿ ಸ್ವಾಮ್ಯದ ವಿವಿಧ ಇಲಾಖೆಗಳಿಂದ ಈ ಕೆಲಸ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಿ. ಹೆಚ್. ಪಟೇಲ್ (ಮಾನ್ಯ ಕೈಗಾರಿಕಾ ಮಂತ್ರಿಗಳು).—

ಅ) ಹೌದು.

ಆ) ಈ ತರಹದ ಸಲಹೆಯನ್ನೆ ನೀಡಿಲ್ಲ.

ಇ) ಖಾಸಗಿ ಸಲಹೆಗಾರರ ಸಂಸ್ಥೆಗಳ ಮೇಲೆ ಯಾವ ನಿರ್ಭಂಧವೂ ಹಾಕುವ ಯೋಜನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಎರಡನೆಯ ಪ್ರಶ್ನೆಗೆ ಈ ತರಹದ ಸಲಹೆಯನ್ನು ನೀಡಿಲ್ಲ ಎಂದು ಹೇಳಿದ್ದಾರೆ. ತಿಂಗಳಿಗೆ ಮೂರು ನೂರು, ಒಂದು ಸಾವಿರ ಕೈಗಾರಿಕೆಗಳನ್ನು ಮಾಡುತ್ತಾ ಇದ್ದೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಕೈಗಾರಿಕೆಯನ್ನು ಪ್ರಾರಂಭಿಸಲು ನನ್ನಂತಹವರು ಯಾರಾದರೂ ಅರ್ಜಿ ಹಾಕಿದರೆ, ಅವರು ನೀನು ಅವರ ಹತ್ತಿರ ಸಲಹೆ ತೆಗೆದುಕೊಂಡು ಬಾ. ಇವರ ಹತ್ತಿರ ಸಲಹೆ ತೆಗೆದುಕೊಂಡು ಬಾ ಎಂದು ಹೇಳುತ್ತಿದ್ದಾರೆ. ನಿಮ್ಮ ಕೆ.ಎಫ್.ಸಿ. ಯವರು ಏನು ಮಾಡುತ್ತಿದ್ದಾರೆ ಎಂದರೆ, ಒಬ್ಬೊಬ್ಬ ಒಂದೊಂದು ಬ್ರಾಂಚಿನಲ್ಲಿ ಕೈಗಾರಿಕಾ ಪ್ರೈವೇಟ್ ಕನ್ಸಲ್ಟೆಂಟ್‌ಗಳನ್ನು ಇಟ್ಟುಕೊಂಡಿದ್ದಾರೆ. ಅರ್ಜಿದಾರರು ಅಲ್ಲಿಗೆ ಹೋಗಬೇಕು. ಅಲ್ಲಿಂದ ಬಾರದಿದ್ದರೆ ದುಡ್ಡು ಕೊಡುವುದಿಲ್ಲ. ಕೊಯಿರಿ ಹಾಕುತ್ತಿದ್ದಾರೆ. ಈ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ? ನೀವು ಫೈನಾನ್ಸಿಯಲ್ ಅಸಿಸ್ಟೆನ್ಸ್‌ನ್ನು ಅವರಿಗೆ ಕೊಡುತ್ತಿದ್ದಾರಲ್ಲ, ಆದುದರಿಂದ ಅವರಿಗೆ ಆದೇಶ ಕೊಡುತ್ತೀರಾ ?

ಶ್ರೀ ಜಿ. ಎಚ್. ಪಟೇಲ್.—ಆ ತರಹ ನಮ್ಮ ಹಣಕಾಸಿನ ಸಂಸ್ಥೆಗಳು ಯಾವುದೋ ಕೈಗಾರಿಕಾ ಸಂಸ್ಥೆಗಳಿಗೆ ಸಹಾಯ ಮಾಡುವ ರೀತಿಯಿಂದ ಉದ್ದಿಮೆಗಳಿಗೆ ನಿರ್ದೇಶನ ಕೊಡುತ್ತಾರೆ ಎನ್ನುವುದಾ, ಯಾವ ತರಹದಿಂದಲೂ ನಮ್ಮ ಗಮನಕ್ಕೆ ಬಂದಿಲ್ಲ. ಆದರೆ ಈ ಕೈಗಾರಿಕಾ ಸಲಹೆಗಾರರು ಏನಿದ್ದಾರೆ ಅವರಿಗೆ ನಾವು ಸಲಹೆ ಕೊಡಬೇಡಿ ಎಂದು ನಮ್ಮ ಕಾನೂನಿನ ಪ್ರಕಾರ ಮಾಡುವಹಾಗಿಲ್ಲ. ಅದೂ ಒಂದು ಪ್ರೊಫೆಶನ್. ನಾವು ಸುಮಾರು ಒಂದು ತಿಂಗಳಿಗೆ ಒಂದು ಸಾವಿರ ಇಂಡಸ್ಟ್ರೀಗಳನ್ನು ಪ್ರಾರಂಭ ಮಾಡಬೇಕು, ಸಣ್ಣ, ಮಧ್ಯಮ, ಭಾರಿ ಕೈಗಾರಿಕೆಗಳನ್ನು ಮಾಡಬೇಕೆನ್ನುವ ಸರಕಾರದ ಉದ್ದೇಶದಲ್ಲಿ ಎಲ್ಲವೂ ಕನ್ಸಲ್ಟೆನ್ಸಿ ಮೂಲಕವೇ ಆಗಬೇಕೆಂದರೆ ಆಗುವುದಿಲ್ಲ. Fiscaly it is not possible for the Government, ಪ್ರೈವೇಟ್ ಕನ್ಸಲ್ಟೆನ್ಸಿಯವರೂ ಇರುತ್ತಾರೆ. ಉದಾಹರಣೆಗೆ ಸಣ್ಣದೊಂದು ಬೆಂಕಿ ಪೆಟ್ಟಿಗೆ ಕಾರ್ಖಾನೆಯನ್ನು ಮಾಡುತ್ತಾರೆ ಎಂದರೆ, ಅದಕ್ಕೆ ಯಾರಾದರೂ ಗೊತ್ತಿರತಕ್ಕಂತಹವರನ್ನು ಅವರು ಕನ್ಸಲೆಟ್ ಮಾಡಿಕೊಂಡು ಬರುತ್ತಾರೆ. ಅದನ್ನು ನಾವು ತಪ್ಪಿಸುವುದಕ್ಕೆ ಸಾಧ್ಯವೇ ?

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ನನ್ನ ಪ್ರಶ್ನೆಯೇ ಬೇರೆ, ಅವರು ಕೊಡುತ್ತಿರುವ ಉತ್ತರವೇ ಬೇರೆ. ನಾವು ಕೈಗಾರಿಕೆಗಾಗಿ ಅರ್ಜಿ ಹಾಕಿದರೆ ಅದಕ್ಕೆ ಸಲಹೆ ನೀಡಲು ನಮ್ಮ ಸರಕಾರದ

ಕನ್ಸಲ್ಟೆಂಟ್ಸ್ ಇದ್ದಾರೆ. ಸರ್ಕಾರದ ಅಧಿಕೃತ ತಾಂತ್ರಿಕ ನಿರ್ದೇಶಕರಾದ ಟೆಕ್ಸಾಕ್ ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ, ಕರ್ನಾಟಕ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿ, ಜಿಲ್ಲಾ ಕೈಗಾರಿಕಾ ಕೇಂದ್ರ ಇವೆಲ್ಲ ಇದ್ದರೂ ಕೂಡಾ ಇವರ ಒಂದು ಓಪೀನಿಯನ್‌ನನ್ನು ಅವರು ಕೇಳುತ್ತಾ ಇಲ್ಲ. ಪ್ರೈವೇಟ್‌ನಿಂದಲೇ ತೆಗೆದು ಕೊಂಡು ಬನ್ನಿ ಅಲ್ಲಿಂದಲೇ ತನ್ನಿ, ಇಲ್ಲಿಂದಲೇ ತನ್ನಿ ಎಂದು ಹೇಳುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಬಾರದಿದ್ದರೆ, ನಿಮ್ಮ ಕೆ.ಎಸ್.ಎಫ್.ಸಿ. ಯಲ್ಲಿ ಪ್ರತಿಯೊಂದೂ ಬ್ರಾಂಚಿನಲ್ಲಿಯೂ ಇಂತಿಂತಹವರ ಕಡೆಗೆ ಹೋಗಿ ಎಂದು, ಒಬ್ಬೊಬ್ಬ ಕನ್ಸಲ್ಟೆಂಟ್‌ನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ನೀವು ಈ ರೀತಿಯಲ್ಲಿ ಕೇಳುವುದು ತಪ್ಪು ಎಂದು ಆ ಅಧಿಕಾರಿಗಳಿಗೆ ತಾವುಗಳು ಆದೇಶ ಕೊಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಯಾವುದೇ ಕೈಗಾರಿಕೆ ಪ್ರಾರಂಭ ಮಾಡತಕ್ಕಂತಹವರು ಕಾನೂನು ಪ್ರಕಾರ ಯಾರಿಂದ ಪ್ರಾಜೆಕ್ಟ್ ರಿಪೋರ್ಟ್‌ನ್ನು ಮಾಡಿಸಬೇಕೆಂದು ನಾವು ನಿರ್ದೇಶನ ಮಾಡುವುದಕ್ಕೆ ಬರುವುದಿಲ್ಲ. ಆಥವಾ ಕೆ.ಎಸ್.ಎಫ್.ಸಿ. ಯವರು ಅಕಸ್ಮಾತ್ತಾಗಿ ಏನಾದರೂ ಯಾವುದೇ ಆಸಕ್ತ ಸಂಸ್ಥೆಗೋಸ್ಕರ ಸಹಾಯ ಮಾಡುವುದಕ್ಕೋಸ್ಕರ ಹೇಳುತ್ತಾ ಇದ್ದರೆ ಅದು ಅಕ್ರಮವಾಗುತ್ತದೆ. ಅದನ್ನು ತಿದ್ದುತ್ತೇವೆ. ನಮ್ಮ ಸಂಸ್ಥೆಯಿಂದ ಕೈಗಾರಿಕೆಗೆ ಆರ್ಜಿ ಮಾಡುವ ವರಿಗೆಲ್ಲಾ ನಮ್ಮ ಹತ್ತಿರವೇ ಬಂದು ಅಡ್ವೈಸ್ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕಾಗುವುದಿಲ್ಲ, ಆರ್ಡರಿಯಾಗಿ ಹೇಳುವುದಕ್ಕೆ ಸಾಧ್ಯವೂ ಇಲ್ಲ. ಆದುದರಿಂದ ಕೈಗಾರಿಕೆಗಳ ಸಲಹೆಗಾರರ ಮೇಲೆ ನಿರ್ಭಂದ ಹಾಕುವುದಕ್ಕೆ ಕಾನೂನು ಪ್ರಕಾರ ಸಾಧ್ಯವಿಲ್ಲ. ಮತ್ತು ಸೂಕ್ತವೂ ಅಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಕೇಳುತ್ತಾ ಇರುವುದು—ನೀವು ಅವರ ಫಂಡಮೆಂಟಲ್ ರೈಟ್ಸ್‌ಗೆ ಇನ್‌ಫ್ರಿಂಟ್‌ಮೆಂಟ್ ಮಾಡಿ ಎಂದು ನಾನು ಹೇಳುತ್ತಾ ಇಲ್ಲ. ಅವರು ಬೇಕಾದಷ್ಟು ಹೋಗಬಹುದು, ಬೋರ್ಡ್ ಹಾಕಿಕೊಳ್ಳಬಹುದು ಅದಕ್ಕೆ ನಮ್ಮ ಅಡ್ಡಿಯಿಲ್ಲ. ನಮಗೆ ಸರಕಾರದ ವತಿಯಿಂದ ಇರುವ ಕನ್ಸಲ್ಟೆಂಟ್ ಮೂಲಕ ಸಲಹೆ ಸಿಕ್ಕಿದರೆ ಸಾಕು ನಮ್ಮನ್ನು ಪ್ರೈವೇಟ್ ಕನ್ಸಲ್ಟೆಂಟ್ಸ್ ಕಡೆಗೆ ಕಳುಹಿಸುವುದನ್ನು ತಪ್ಪಿಸಿದರೆ ಸಾಕು. ಅದಕ್ಕೆ ಸರಕಾರದವರ ಒಂದು ಆರ್ಡರ್ ಆದರೆ ಸಾಕು. ಇದರಿಂದಾಗಿ ನಮಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಜೆ. ಎಚ್. ಪಟೇಲ್.—ಇದು ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಸವದತ್ತಿ ನಗರದಲ್ಲಿ ಮುನ್ಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯ ಕಟ್ಟಡದ ಬಗ್ಗೆ

೨೫೧ (೭೨೪) ಶ್ರೀ ಎಂ. ಚಂದ್ರಶೇಖರ ಮಾವಿನ (ಪರಸಗಡ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ದಯವಿಟ್ಟು ಉತ್ತರಿಸುವರೆ :—

ಅ) ಸವದತ್ತಿ ನಗರದಲ್ಲಿ ಮುನಿಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯದ ಕಟ್ಟಡಕ್ಕೆ ೧೯೮೪ರಲ್ಲಿ ಶಂಕುಸ್ಥಾಪನೆ ಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು. ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಬಂದಿದೆ.

ಆ) ಕಟ್ಟಡ ಕೆಲಸಕ್ಕಾಗಿ ಟೆಂಡರ್ ಕರೆಯಲಾಗಿದೆ. ಆದಷ್ಟು ತೀವ್ರಗತಿಯಲ್ಲಿ ಇದನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಎಂ. ಚಂದ್ರಶೇಖರ ಮಾವಿನ.—ಮಾನ್ಯ ಮಂತ್ರಿಯವರಲ್ಲಿ ನಾನು ಕೇಳುವುದು ಏನೆಂದರೆ ಸವದತ್ತಿ ನಗರದ ಮುನ್ಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯದ ಕಟ್ಟಡಕ್ಕೆ ಒಂದು